
ಗೇರಿನಲ್ಲೇ ಆ ಕಾಡಿನ ಮೊಂಡು ದಾರಿಯಲ್ಲೇ ಜೀಪನ್ನು ಗಾಳಿವೇಗದಲ್ಲಿ ಹಿಂದಕ್ಕೆ ತೆಗೆದ. ಇಂಥ ಕೆಟ್ಟ ರಸ್ತೆಯಲ್ಲೂ ಕರಾರುವಕ್ಕಾಗಿ ಗಾಡಿ ಓಡಿಸುವಲ್ಲಿ ಇಲ್ಲಿನ ಸಫಾರಿ ಚಾಲಕರು ನಿಪುಣರು. ನಾವು ಉದ್ವೇಗದಿಂದ ಹಿಂದೆ ಬಂದದ್ದು ಸಾರ್ಥಕವಾಯಿತ್ತು. ಚಿರತೆ ಮರದೆಲೆಗಳ ಮಧ್ಯೆ ಕಳ್ಳಗಣ್ಣು ಬಿಟ್ಟು ಕೂತಿತ್ತು. ಮರದ ಮೇಲಿನ ಚಿರತೆಯ ಪಟ ನಾನು ಮೊದಲ ಸಲ ತೆಗೆದದ್ದು ಆಗಲೇನೆ. ತಿಣುಕಾಡಿ, ಒದ್ದಾಡಿ, ಕೊಸರಾಡುತ್ತಾ ಇರುವ ಜಾಗದಲ್ಲೇ ಕ್ಯಾಮೆರಾ ಭದ್ರ ಹಿಡಿದುಕೊಂಡು ಚಿತ್ರ ತೆಗೆದೆವು.

ತುಂಬಾ ಸಲ ನಾವು ನಿಂತ ಜಾಗಕ್ಕೂ ಪ್ರಾಣಿ ಇರುವ ಸ್ಥಳಕ್ಕೂ ನಡುವೆ ಅನೇಕ ಅಡ್ಡಿ ಆತಂಕಗಳಿರುತ್ತವೆ. ನಮ್ಮ ಮುಂದೆ ಕ್ಯಾಮೆರಾ ಹಿಡಿದವರ ತಲೆ ನಿಮಗೆ ಖಂಡಿತಾ ಅಡ್ಡ ಬಂದೇ ಬರುತ್ತದೆ. ಹೇಳುವಂತಿಲ್ಲ ಬಿಡುವಂತಿಲ್ಲ. ಆಗ ಅವನೂ ನಮ್ಮಷ್ಟೇ ಆಕ್ರಮಣಕಾರಿಯಾಗಿ ಫೋಟೊ ಜಡಿಯುತ್ತಿರುತ್ತಾನೆ. ಎಲ್ಲರಿಗೂ ಸಿಗುವುದು ಕೆಲವೇ ನಿಮಿಷದ ಸಮಯ. ಇದರ ಮಧ್ಯೆ ನಮ್ಮ ಗ್ರಹಚಾರ ಕೆಟ್ಟು ನಮಗೂ ಪ್ರಾಣಿಗೂ ನಡುವೆ ಯಾವುದಾದರೂ ಮರವೋ, ಕೊಂಬೆಯೋ, ಎಲೆಯೋ, ಇಲ್ಲವೇ ಕೊನೆಗೆ ಸಣ್ಣ ಕಡ್ಡಿಯೋ ಅಡ್ಡ ಬಂದರೂ ಸಾಕು ಸಬ್ಜೆಕ್ಟ್ ಫೋಕಸ್ ಮಾಡಲು ಆಗುವುದೇ ಇಲ್ಲ. ಈ ತರಹ ಆಗಿ ನಾನು ಅನೇಕ ಸಲ ಒಳ್ಳೆಯ ಚಿತ್ರಗಳ ಕಳಕೊಂಡಿದ್ದೇನೆ. ನಾವು ಕೂತ ಬದಿಗೆ ಹುಲಿಯೋ, ಚಿರತೆಯೋ ಕಾಣಿಸಿಕೊಂಡರೆ ನಮ್ಮ ಪಾಲಿಗದು ಪುಣ್ಯದ ದಿನ.



ಮತ್ತೊಂದು ದಿನ ನಾವೆಲ್ಲಾ ಗೆಳೆಯರು ದಾಂಡೇಲಿ ಬಳಿಯ ಗಣೇಶಗುಡಿ ಎಂಬ ಊರಿಗೆ ಹೋದೆವು. ಅಲ್ಲಿ ಓಲ್ಡ್ ಮ್ಯಾಗ್ಜೀನ್ ಹೌಸ್ ಎಂಬ ಬ್ರಿಟಿಷರ ಕಾಲದ ಕಣಿವೆ ಪ್ರದೇಶವೊಂದಿದೆ. ಈ ದಟ್ಟಕಾಡಿನ ಭಾಗ ಹಕ್ಕಿಗಳಿಗೆ ತವರುಮನೆ ಇದ್ದಂತೆ. ತರಹೇವಾರಿ ಖಗಗಳು ಇಲ್ಲಿನ ಪರಿಸರವನ್ನು ಮೆಚ್ಚಿ ನೂರಾರು ವರ್ಷಗಳಿಂದ ವಲಸೆ ಬರುತ್ತಿವೆ. ದೇಶ ವಿದೇಶದ ಅಪರೂಪದ ಸಂಕುಲಗಳ ಕಲರವ ಕಾಣಲು ಸಾಧ್ಯವಿರುವ ಈ ಜಾಗೆ ಪಕ್ಷಿಪ್ರಿಯರಿಗೆ ಸ್ವರ್ಗವಿದ್ದಂತೆ. ಕಾಳಿ ನದಿ ಪರಿಸರದ ಬೆನ್ನಿಗೆ ಅಂಟಿಸಿದ ಹಾಗಿರುವ ಈ ಸ್ಥಳದಲ್ಲಿ ಬ್ರಿಟೀಷರು ಮದ್ದು ಗುಂಡುಗಳನ್ನು ಇಡುತ್ತಿದ್ದರಂತೆ. ಸಿಡಿದು ಸಾಯಿಸುವ ಯುದ್ಧ ಸಾಮಗ್ರಿಗಳನ್ನು ನಿಸರ್ಗದ ತಂಪಾದ ತಾವಿನಲ್ಲಿ ಶಾಂತವಾಗಿ ಇಡುವುದು ಒಂದು ಕ್ರಮವಂತೆ.

ಅಲ್ಲಿಗೆ ನಾವು ಹೋಗುವಷ್ಟರಲ್ಲೇ ಸಂಜೆ ಆಗುತ್ತಿತ್ತು. ಹಸಿರು ಕುಕ್ಕುವ ಕಾಡಿನ ನಡುವೆ ಹಾವಿನಂತೆ ಹಾದು ಹೋದ ರಸ್ತೆ. ವಾಲಾಡಿ, ಬಳುಕಾಡಿದ ನಮ್ಮ ಮೈಯ ನಟ್ಟು ಬೋಲ್ಟುಗಳು ಸಡಿಲವಾಗಿದ್ದವು. ಹೊಟ್ಟೆ ತೊಳಸಿ, ಸುದೀರ್ಘ ಪಯಣ ಹೈರಾಣಾಗಿಸಿ ಬಿಟ್ಟಿತ್ತು. ಕನಿಷ್ಠ ನೂರು ಗ್ರಾಂ ತೂಕವೂ ಇಲ್ಲದ ಬಣ್ಣದ ಹಕ್ಕಿಗಳ ತುಂಬಿಕೊಳ್ಳಲು ಹೆಣಭಾರದ ಕ್ಯಾಮೆರಾ ಹೊತ್ತು ತರುತ್ತಿದ್ದೆವು. ಹಕ್ಕಿಗಳ ಲವಲವಿಕೆ, ಪ್ರಾಣಿಗಳ ಆಕರ್ಷಣೆ, ಕಾಡಿನ ಸಾಂತ್ವನ ಬಯಸುವ ಮನಸ್ಸಿನ ಚಟವೇ ದುಬಾರಿ ಅಲೆಮಾರಿತನ.

ಮಾರನೆಯ ದಿನ ತೀರಾ ಬೆಳಿಗ್ಗೆ ನಾನು ಮತ್ತು ಅವಿನಾಶ್ ಮೊದಲೇ ಎದ್ದು ಸಿದ್ಧರಾದೆವು. ಇಡೀ ಕಾನನ ಮಂಜಿನಲ್ಲಿ ಮುಳುಗಿ ಹೋಗಿತ್ತು. ರಾತ್ರಿಯ ನನ್ನ ಗೊರಕೆ ಸದ್ದಿಗೆ ನಾನೇ ನಿದ್ರೆ ಮಾಡಿಲಿಲ್ಲ ಎಂದರೆ ಉಳಿದವರ ಪಾಡು ಆವತ್ತು ಏನಾಗಿರಬೇಡ! ಅವಿನಾಶ್ ಮೆತ್ತಗೆ 'ಅದೇನ್ ಸಾರ್ ಫ್ಯಾಕ್ಟ್ರೀ ಸೈರನ್ನೇ ಮಡಗಿದ್ದೀರಾ?' ಎಂದು ತರಲೆ ತೆಗೆದನು. ಈ ಅಭಿನಂದನೆ ನನಗೇನು ಹೊಸದಲ್ಲ. 'ತಲೆತಲಾಂತರದ